ದಿನಾಂಕಃ 04-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಡಿ.ಎನ್ **2** ನೇ ಪ್ರತಿವಾದಿ ಪರ ವಕೀಲರಿಂದಃ

ದಾವಾ ಐಟಂ ನಂ.1 ರ ಆಸ್ತಿಯು 2 ನೇ ಪ್ರತಿವಾದಿ ಹಾಗೂ ಅವರ ಹೆಂಡತಿಗೆ ಸರ್ಕಾರದಿಂದ ಜಂಟಿಯಾಗಿ ಮಂಜೂರಾದ ಜಮೀನು ಎಂದರೆ ಸಾಕ್ಷಿ ನಾವೆಲ್ಲರೂ ಒಟ್ಟು ಕುಟುಂಬದಲ್ಲಿರುವಾಗ ಮಂಜೂರಾಗಿದೆ ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾ ಐಟಂ ನಂ.1 ರಲ್ಲಿ 2 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಮಾತ್ರ ಉಳುಮೆ ಮಾಡುತ್ತಿದ್ದ ಕಾರಣ ಅವರ ಹೆಸರಿಗೆ ಪ್ರತ್ಯೇಕವಾಗಿ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಗಂಗಮ್ಮರವರು ತೀರಿಕೊಂಡ ನಂತರ ಸದರಿ ಆಸ್ತಿಯು 2 ನೇ ಪ್ರತಿವಾದಿಯ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ನಾವೆಲ್ಲರೂ ಒಟ್ಟಿಗೆ ಉಳುಮೆ ಮಾಡುತ್ತಿದ್ದೆವು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಸಹ ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ಅಥವಾ ಸಂಬಂಧಪಟ್ಟ ಇಲಾಖೆಗಳಿಗೆ ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಜಮೀನುಗಳನ್ನು ಕಬಳಿಸುವ ಉದ್ದೇಶದಿಂದ ಒಟ್ಟು ಕುಟುಂಬದ ಇತರೆ ಆಸ್ತಿಗಳನ್ನು ಹೊರತುಪಡಿಸಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆಯ ಹೆಸರಿನಲ್ಲಿರುವ ಪಹಣಿಗಳು ನಮ್ಮ ಕುಟುಂಬದ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವುಗಳನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ಮಾರಾಟ ಮಾಡಿ ಸುಮಾರು 25 ವರ್ಷಗಳು ಕಳೆದಿವೆ. ನನ್ನ ತಾಯಿಯ ಹೆಸರಿನಲ್ಲಿದ್ದ ಜಮೀನುಗಳನ್ನು ನಾರಾಯಣಪ್ಪರವರಿಗೆ ಮಾರಾಟ ಮಾಡಲಾಗಿದೆ ಹಾಗೂ ನನ್ನ ತಂದೆಯ ಹೆಸರಿನಲ್ಲಿದ್ದ ಜಮೀನುಗಳನ್ನು ನಂಜುಂಡಯ್ಯ ರವರಿಗೆ ಮಾರಾಟ ಮಾಡಲಾಗಿದೆ. ಸದರಿ ಮಾರಾಟಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ

ಮಾರಾಟ ಮಾಡಿರುವ ಆಸ್ತಿಗಳಲ್ಲಿ ನನಗೆ ಭಾಗ ಬರಬೇಕೆಂದು ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಸದರಿ ಜಮೀನುಗಳನ್ನು ಖರೀದಿಸಿದ ನಾರಾಯಣಪ್ಪರವರು ಪಹಣಿ ಮತ್ತು ಮ್ಯೂಟೇಶನ್ ಅನ್ನು ಅವರ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ಸದರಿ ಜಮೀನುಗಳನ್ನು ಮಾರಾಟ ಮಾಡಿಲ್ಲ ಹಾಗೂ ಅವುಗಳ ಪಹಣಿಗಳಲ್ಲಿ ಹೆಸರುಗಳು ಬದಲಾಗದಿದ್ದರೂ ಸಹ ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಮಾರಾಟವಾದಾಗ ಸಂಬಂಧಪಟ್ಟ ಪತ್ರಗಳಿಗೆ ನಾನು ಸಹಿ ಮಾಡಿರುವುದಿಲ್ಲ.

ನಾವು 10-15 ವರ್ಷಗಳಿಂದ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ. ನನಗೆ ಹಲವಾರು ವರ್ಷಗಳಿಂದ ಪ್ರತ್ಯೇಕವಾದ ಪಡೀತರ ಚೀಟಿ ಹಾಗೂ ಗುರುತಿನ ಚೀಟಿಗಳು ಬಂದಿವೆ ಎಂದರೆ ಸರಿ. ನಿಪಿ-1ರ ವಂಶವೃಕ್ಷದಲ್ಲಿ ಕಾಣಿಸುವ ದೊಡ್ಡನರಸಿಂಹಪ್ಪರವರ ಮಕ್ಕಳಾದ ನಾರಾಯಣಪ್ಪ , ಗಂಗಾಧರಪ್ಪ , ಗಂಗಮ್ಮ, ಬಾಲಮ್ಮ ಮತ್ತು ಅವರವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂ.1ರ 3 ಎಕರೆ 9 ಗುಂಟೆ ಜಮೀನಿನ ಪೈಕಿ 1 ಎಕರೆಯ ಮಾರುಕಟ್ಟೆ ಬೆಲೆ ರೂ. 15,00,000/-ರಿಂದ ರೂ. 20,00,000/- ಇದೆ ಎಂದರೆ ಸರಿ. ದಾವಾ ಐಟಂ ನಂ.2ರ ಮನೆಯ ಮಾರುಕಟ್ಟೆ ಬೆಲೆ ರೂ. 1,00,000/-ರಿಂದ ರೂ. 1,50,000/- ಇರಬಹುದು. ದಾವಾ ಐಟಂ ನಂ.2 ನ್ನು 2 ನೇ ಪ್ರತಿವಾದಿಯು ಸ್ವಂತ ಹಣದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2ರಲ್ಲಿ 2 ನೇ ಪ್ರತಿವಾದಿಯೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿಯ ಮಗನಿಗೆ ನಾನು ದಾವಾ ಐಟಂ ನಂ.2 ರ ಮನೆಯನ್ನು ಬಿಟ್ಟುಕೊಟ್ಟಿದ್ದೇನೆ ಹಾಗೂ ಅದರಲ್ಲಿ ಅವರು ವಾಸವಿದ್ದಾರೆ ಎಂದು ನುಡಿಯುತ್ತಾರೆ. ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನಾನು ಬಾಡಿಗೆ ಮನೆಯಲ್ಲಿ ವಾಸವಿರುವ ವಿಚಾರವನ್ನು ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಹಾಜರುಪಡಿಸಿಲ್ಲ.

ನಿಪಿ-4ರ ಬಿಡುಗಡೆ ಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟರು ಎಂಬುದು ನನಗೆ ಗೊತ್ತಿಲ್ಲ. ನಿಪಿ-4 ನ್ನು ಹಾಜರುಪಡಿಸುವ ಮುನ್ನ ಅದರ ಬಗ್ಗೆ ವಿಚಾರಗಳನ್ನು ಕೇಳಿ

ನಾನು ತಿಳಿದುಕೊಂಡಿರುವುದಿಲ್ಲ. ನಿಪಿ-4 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-4 ನ್ನು ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳಲ್ಲಿ ನನಗೆ ಯಾವುದೇ ಹಕ್ಕು ಅಥವಾ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಈ ಸುಳ್ಳು ದಾವೆಯನ್ನು ಹೂಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುವ ಕಾರಣ ಅವುಗಳ ಮ್ಯೂಟೇಶನ್ ಗೆ ಸಂಬಂಧಪಟ್ಟಂತೆ ನಾನು ಯಾವುದೇ ತಕರಾರು ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 2 ನೇ ಪ್ರತಿವಾದಿಯು ಅಳವಡಿಸಿರುವ ಕೊಳವೆ ಬಾವಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. 2 ನೇ ಪ್ರತಿವಾದಿಯು ದಾಖಲಾತಿಗಳನ್ನು ಸೃಷ್ಠಿ ಮಾಡಿದ್ದಾರೆ ಎಂದು ನನ್ನ ವಾದ ಪತ್ರದಲ್ಲಿ ಬರೆದಿರುವುದಿಲ್ಲ. 2 ನೇ ಪ್ರತಿವಾದಿಯು ದಾಖಲಾತಿಗಳನ್ನು ಸೃಷ್ಠಿ ಮಾಡಿದ್ದಾರೆ ಎಂದು ಸಂಬಂಧಪಟ್ಟ ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ. ದಾವಾ ಸ್ವತ್ತುಗಳು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದು ನನಗೆ ತಿಳಿದಿದ್ದರೂ ಸಹ ಅವರಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಈಗ ಬೆಂಗಳೂರಿನಲ್ಲಿದ್ದಾರೆ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು